## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 280 |
| 2 | ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 18-07-2024 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಓಕಳೀಪುರಂ ನಿಂದ ರೈಲ್ವೆ ನಿಲ್ದಾಣದವರೆಗೂ ನಿರ್ಮಾಣ ಮಾಡಲಾಗಿರುವ ಅಷ್ಟಪಥ ರಸ್ತೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭವಾಯಿತು ಹಾಗೂ ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿದೆ; | ಬೆಂಗಳೂರು ನಗರದ ಓಕಳೀಪುರಂ ನಿಂದ ಪೌಂಟೇನ್ ವೃತ್ತದವರೆಗೆ ಲೂಪ್‌ಗಳೊಂದಿಗೆ ಅಷ್ಟಪಥ ಕಾರಿಡಾರ್ ನಿರ್ಮಾಣ ಕಾಮಗಾರಿಗೆ ದಿನಾಂಕ: 10-12-2012 ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ದಿನಾಂಕ 01-07-2015 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿ ಬಹುತೇಕ ಪೂರ್ಣಗೊಂಡಿರುತ್ತದೆ. ಪ್ರಸ್ತುತ ರೈಲ್ವೇ ಇಲಾಖೆಯ ವತಿಯಿಂದ ಕೆಳಸೇತುವೆಗಳ (RUB) ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ, ಪಾಲಿಕೆಯಿಂದ ಕೈಗೆತ್ತಿಗೊಂಡಿರುವ ಕಾಮಗಾರಿಯನ್ನು ಪೂರ್ಣ ಗೊಳಿಸಲಾಗಿರುವುದಿಲ್ಲ. ರೈಲ್ವೇ ಇಲಾಖೆರವರು ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. |
| ಆ) | ಈ ಕಾಮಗಾರಿಯನ್ನು ಯಾವ ಯಾವ ಗುತ್ತಿಗೆದಾರರಿಗೆ ನೀಡಲಾಗಿತ್ತು; ಕಾಮಗಾರಿ ಪೂರ್ಣಗೊಳಿಸಲು ನೀಡಲಾದ ಕಾಲಾವಧಿ ಎಷ್ಟು; ನೀಡಲಾಗಿರುವ ಕಾಲಾವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದಾರೆಯೇ; | ಈ ಕಾಮಗಾರಿಯನ್ನು ಗುತ್ತಿಗೆದಾರರಾದ ಮೆ॥ ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ ರವರಿಗೆ ನೀಡಲಾಗಿರುತ್ತದೆ. ಕಾಮಗಾರಿ ಪೂರ್ಣಗೊಳಿಸಲು 18 ತಿಂಗಳು ಕಾಲಾವಧಿಯನ್ನು ನೀಡಲಾಗಿತ್ತು. ಭೂಸ್ವಾಧೀನ ಪ್ರಕ್ರಿಯೆ ಹಾಗೂ ರೈಲ್ವೇ ಹಳಿಗಳ ಕೆಳಭಾಗದಲ್ಲಿ ನಿರ್ಮಿಸ ಬೇಕಾಗಿರುವ ಕೆಳಸೇತುವೆಗಳನ್ನು ರೈಲ್ವೇ ಇಲಾಖೆ ವತಿಯಿಂದ ಪೂರ್ಣಗೊಳಿಸದ ಕಾರಣ ನೀಡಲಾದ ಕಾಲಾವಧಿ ಮಿತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುವುದಿಲ್ಲ ಹಾಗೂ ಗುತ್ತಿಗೆದಾರರು ನಿರ್ವಹಿಸಬೇಕಾಗಿರುವ ಕೆಲವು ಕಾಮಗಾರಿಗಳನ್ನು ವಿಳಂಬವಾಗಿ ಪೂರ್ಣಗೊಳಿಸಿರುವುದಕ್ಕೆ ರೂ.56,63,972/- ಗಳ ದಂಡವನ್ನು ವಿಧಿಸಲಾಗಿದೆ. |
| ಇ) | ಸರ್ಕಾರ ನೀಡಿರುವ ಸಮಯಕ್ಕೆ ಸರಿಯಾಗಿ ಕಾಮಗಾರಿ ಪೂರೈಸದಿದ್ದಲ್ಲಿ ಸರ್ಕಾರದ ನಿಯಮದಡಿ ಗುತ್ತಿಗೆದಾರರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗುತ್ತದೆ; | ಈ ಯೋಜನೆಗೆ ರೂ.102.83 ಕೋಟಿಗಳ ಗುತ್ತಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಸದರಿ ಕಾಮಗಾರಿಯು Lump sum Turnkey Contract ಆಗಿರುವುದರಿಂದ ಈ ಮೊತ್ತದಲ್ಲಿ ಯಾವುದೇ |

| | | |
|---|---|---|
| ಈ) | ಈ ಯೋಜನೆಗೆ ಪ್ರಾರಂಭದಲ್ಲಿ ಎಷ್ಟು ಮೊತ್ತಕ್ಕೆ ಟೆಂಡರ್ ಅನುಮತಿ ನೀಡಲಾಗಿದೆ; ತದನಂತರ ಹೆಚ್ಚುವರಿಯಾಗಿ ಬಿಡುಗಡೆಯಾಗಿರುವ ಅನುದಾನ ಎಷ್ಟು; (ಕಾರಣಗಳೊಂದಿಗೆ ಪೂರ್ಣ ವಿವರ ಒದಗಿಸುವುದು) | ವ್ಯತ್ಯಾಸವಿರುವುದಿಲ್ಲ. ಹೆಚ್ಚುವರಿಯಾಗಿ ರೂ.10.00 ಕೋಟಿಗಳ ಅನುದಾನವನ್ನು "ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಯ ಅಡಿಯಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಈ ಅನುದಾನವನ್ನು ಬಳಸಿಕೊಂಡಿರುವುದಿಲ್ಲ. |
| ಉ) | ಈ ಯೋಜನೆಯು ಅವೈಜ್ಞಾನಿಕವಾಗಿ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಒಂದು ಕಡೆಯಿಂದ ರಸ್ತೆ ದೊಡ್ಡದಾಗಿದ್ದು, ತದನಂತರ ರಸ್ತೆ ಕಿರಿದಾಗಿರುವುದರಿಂದ, ಟ್ರಾಫಿಕ್ ಸಮಸ್ಯೆ ಆಗುತ್ತಿರುವುದು ಹಾಗೂ ಮಳೆಯ ನೀರಿನಿಂದ ಸಂಚಾರ ಮಾಡಲು ಕಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ? | • ಈ ಕಾಮಗಾರಿಯು ಪಾಲಿಕೆಯ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಯ ನಂತರವಷ್ಟೇ ಕಾರ್ಯರೂಪಕ್ಕೆ ತಂದಿದ್ದು ವೈಜ್ಞಾನಿಕವಾಗಿಯೇ ನಿರ್ಮಿಸಲಾಗುತ್ತಿದೆ.<br>• ರೈಲ್ವೇ ಇಲಾಖೆಯ ವತಿಯಿಂದ ಬೆಂಗಳೂರು–ತುಮಕೂರು ರೈಲ್ವೇ ಹಳಿಗಳ ಕೆಳಭಾಗದ ಕೆಳಸೇತುವೆಗಳ ನಿರ್ಮಾಣ ಪೂರ್ಣಗೊಳಿಸಿದ್ದು, ರಸ್ತೆಗಳು ಸುಮಾರು 15 ಮೀಟರ್‌ಗಳಷ್ಟು ದೊಡ್ಡದಾಗಿರುತ್ತದೆ.<br>• ಬೆಂಗಳೂರು–ಚೆನ್ನೈ ರೈಲ್ವೇ ಹಳಿಗಳ ಕೆಳಭಾಗದಲ್ಲಿ ಎರಡು ಕೆಳ ಸೇತುವೆಗಳನ್ನು ನಿರ್ಮಿಸಬೇಕಾಗಿರುವುದರಿಂದ ರಸ್ತೆಯು ಕಿರಿದಾಗಿರುತ್ತದೆ.<br>• ಈ ಬಾಕಿಯಿರುವ ಕೆಳಸೇತುವೆಗಳ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡ ನಂತರ ಹೊರ ಮತ್ತು ಒಳ ಬರುವ ವಾಹನಗಳಿಗೆ ಸುಮಾರು 15 ಮೀಟರ್‌ಗಳಷ್ಟು ಅಗಲಕ್ಕೆ ರಸ್ತೆಯು ದೊಡ್ಡದಾಗುತ್ತದೆ.<br>• ಬೆಂಗಳೂರು–ತುಮಕೂರು ರೈಲ್ವೇ ಕೆಳಸೇತುವೆಯ ಹತ್ತಿರ ತಾತ್ಕಾಲಿಕವಾಗಿ ಅಳವಡಿಸಿದ್ದ 300 ಮಿ.ಮೀ. ವ್ಯಾಸದ ಪೈಪ್ ಆಗಾಗ್ಗೆ ಬ್ಲಾಕ್ ಆಗುತ್ತಿದ್ದ ಕಾರಣ, ನೀರು ನಿಂತು ವಾಹನ ಸಂಚಾರಕ್ಕೆ ಉಂಟಾಗುತ್ತಿದ್ದ ಅಡಚಣೆಯನ್ನು ತಪ್ಪಿಸಲು 900 ಮಿ.ಮೀ. ವ್ಯಾಸದ NP-4 ಪೈಪ್‌ಗಳನ್ನು ಅಳವಡಿಸಿ ನೀರು ನಿಲ್ಲದಂತೆ ಕ್ರಮ ವಹಿಸಲಾಗಿರುತ್ತದೆ.<br>• ಬೆಂಗಳೂರು–ಚೆನ್ನೈ ರೈಲ್ವೇ ಹಳಿಗಳ ಕೆಳಭಾಗದಲ್ಲಿ ರೈಲ್ವೇ ಇಲಾಖೆಯಿಂದ ನಿರ್ಮಿಸಬೇಕಾಗಿರುವ ಬಾಕಿ ಕೆಳಸೇತುವೆಗಳನ್ನು ಪೂರ್ಣಗೊಳಿಸಿದ ನಂತರ ಶಾಶ್ವತವಾಗಿ ಮಳೆನೀರು ನಿಲ್ಲದಂತೆ ಬೃಹತ್ ನೀರುಗಾಲುವೆಗೆ ಸಂಪರ್ಕಿಸಲಾಗುವುದು. |

**ನಅಇ 331 ಎಂಎನ್‌ವೈ 2024**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ